ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಈಗ ಒಂದು ದೊಡ್ಡ ನೂರಾರು ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಿ ಪ್ರಾಜೆಕ್ಟ್‌ನ್ನು ಕಟ್ಟುವಾಗ ಎಲ್ಲಾ ಪರಿಣತರು ಅದನ್ನು ಕೂಲಂಕಷವಾಗಿ ನೋಡಿ ವಿಚಾರ ಮಾಡಿ ಈ ಯೋಜನೆಯ ಬಗ್ಗೆ ಒಂದು ಇತ್ಯರ್ಥಕ್ಕೆ ಬಂದಿದ್ದಾರೆ. ಈ ರೀತಿ ತೀರ್ಮಾನ ಮಾಡಿದಮೇಲೆ ಮತ್ತೆ ಪ್ರಾಜೆಕ್ಟಿನ ಸ್ಥಳವನ್ನು ಬದಲಾವಣೆ ಮಾಡಿರುವ ಯಾವು ದಾದರೂ ಬೇರೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಕಡೆ ಎಕ್ಸಕವೇಷನ್ ಆದಮೇಲೆ ನರಿಯಾದ ಫೌಂಡೇ ಷನ್ ಸಿಕ್ಕದೆ ಸ್ಥಳಬದಲಾವಣೆಯಾಗಿದೆ. ಇದು ನರಿಯಾದ ಸ್ಥಳ ಎಂದು ತಿಳಿದುಕೊಳ್ಳದೆ ದೊಡ್ಡ ಪ್ರಾಜೆಕ್ಟನ್ನು ಕಟ್ಟುವುದಕ್ಕಾಗುವುದಿಲ್ಲ. ನೂರಾರು ಕೋಟಿ ರೂಪಾಯಿಗಳ ಪ್ರಾಜೆಕ್ಟನ್ನು ಕಟ್ಟು ವಾಗ ನಾವು ಎಲ್ಲಾ ರೀತಿಯಿಂದಲೂ ವಿಚಾರ ಮಾಡಬೇಕಾಗುತ್ತದೆ. ಪ್ರಾಜೆಕ್ಟನ ಸ್ಕೋಪನ್ನು ಬದಲಾವಣೆ ಮಾಡುವುದರಿಂದ ಹೆಚ್ಚಿನ ರೀತಿಯ ಅನುಕೂಲವಾಗಬಹುದು. ಸ್ಕೋಪ್‌ಆಫ್ ವಾರ್ಕ್ ಸ್ಥಳದ ಪರಿಸ್ಥಿತಿ ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಪ್ರಾಜೆಕ್ಟನ್ನು ಕಟ್ಟಬೇಕಾಗು ತ್ತದೆ. ಈ ದೃಷ್ಟಿಯಿಂದ ಒಳ್ಳೆಯ ಸ್ಥಳ ಸಿಕ್ಕುತ್ತದೆ ಎಂದಾಗ ಆ ಸ್ಥಳವನ್ನು ಬದಲಾವಣೆ ಮಾಡುವುದಕ್ಕೆ ಅಡ್ಡಿ ಇರುವುದಿಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ಈಗ ಈ ಯೋಜನೆಗೆ ಸಂಬಂಧಪಟ್ಟಹಾಗೆ 1.81 ಲಕ್ಷ ರೂಪಾಯಿ ಗಳು ಏನು ಖರ್ಚಾಗಿದೆ ಇದು ಇನ್‌ವೆಸ್ಟಿಗೇಷನ್ನಿಗಾಗಿ ಖರ್ಚಾಗಿದೆಯೇ ಅಥವಾ ಬೇರೆ ಕೆಲಸಕ್ಕೆ ಈ ಹಣವನ್ನು ಉಪಯೋಗಿಸಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ವಿಶೇಷವಾಗಿ ಎಕ್ಸ್‌ಕವೇಷನ್ನಿಗೆ ಈ ಹಣ ಖರ್ಚಾಗಿದೆ.

Advertisement for the posts of Principal and Lecturers of Davanagere School of Arts

69. Sri M. G. HANDRAL (Teachers' Constituency).—

Will the Minister for Education be pleased to state :—

(*a*) when the posts of Principal and Lecturers of Davanagere School of Arts will be advertised and suitably filled up ;

(*b*) the number of students admitted for each course this year ?

Sri N. M. KOTRABASIAH SOGI (Deputy Minister for Education).—

(*a*) As soon as the Cadre and Recruitment Rules under consideration are finalised.

(*b*) 14 students have been admitted to the I year Diploma Course in the School of Arts and Crafts, Davanagere, during this year.

ಶ್ರೀ ಎಂ. ಜಿ. ಹಂದ್ರಾಳ್.—ಸ್ವಾಮಿ, ದಾವಣಗೆರೆಯ ಕರಾಶಾಲೆಗೆ ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೂ ಸಹ ಈ ಕರಾ ಶಾಲೆಗೆ ಟೆಂಪ ರರಿಯಾಗಿ ಪ್ರಿನ್ಸಿಪಾಲ್ ಮತ್ತು ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಈ ಕರಾಶಾಲೆಯು ಹೆಚ್ಚು ಪ್ರಗತಿಹೊಂದುವುದಕ್ಕೆ ಅವಕಾಶವಿಲ್ಲದಂತಾಗಿದೆ. ಹೋದ ವರ್ಷ ಕೂಡ ನಾನು ಈ ಹುದ್ದೆಗಳನ್ನು ರೆಗ್ಯುಲರೈಜ್ ಮಾಡಿ ಖಾಯಂ ಆಗಿ ನೇಮಕ ಮಾಡುವ ವಿಷಯದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಆ ಬಗ್ಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಆಗಬೇಕು ಅದನ್ನು ಫೈನಲ್ ಮಾಡಿದಮೇಲೆ ಈ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿದ್ದರು ಈಗಲೂ ಅದೇ ಉತ್ತರ ಇದೆ. ಆ ನೇಮಕಗಳಿಗೆ ಸಂಬಂಧಪಟ್ಟ ಕೇಡರ್ ಅಂಡ್ ರೆಕ್ರೂಟ್ ಮೆಂಟ್ ರೂಲ್ಸ್ ಫೈನಲ್ ಮಾಡುವುದಕ್ಕೆ ಇನ್ನೂ ಎಷ್ಟು ಕಾಲ ಬೇಕು ?

†ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ,—ಅದನ್ನು ಅದಷ್ಟು ತೀವ್ರವಾಗಿ ಮಾಡುತ್ತೇವೆ. ಈಗಾಗಲೇ ಆ ವಿಚಾರದಲ್ಲಿ ಫೈನಲ್ ಸ್ಟೇಜಿನಲ್ಲಿ ಇದ್ದೇವೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ಕಲಾಶಾಲೆಯನ್ನು ಅಭಿವೃದ್ಧಿಗೊಳಿಸಿ ಒಂದು ನರಿಯಾದ ರೀತಿಯಲ್ಲಿ ನಡೆಸಬೇಕು ಮತ್ತು ಒಳ್ಳೆಯ ಪರಿಣಿತರನ್ನು ನೇಮಕ ಮಾಡಬೇಕು ಎಂಬ ಬಗ್ಗೆ ಸರ್ಕಾರದ ಉದ್ದೇಶ ಇಲ್ಲವೆಂದು ನನ್ನ ಭಾವನೆ. ಏಕೆಂದರೆ ನಾನು ಸಹ 3 ವರ್ಷದಿಂದ ಅನೇಕ ಪತ್ರಗಳನ್ನು ಈ ಬಗ್ಗೆ ಸರ್ಕಾರಕ್ಕೆ ಬರೆದಿದ್ದೇನೆ. ಇಲ್ಲಿ ಲಕ್ಷಾಂತರ ರೂಪಾಯಿಗಳು ಅಪವ್ಯಯವಾಗಿದೆ. ಇದೇ ವಿಚಾರದಲ್ಲಿ ಒಬ್ಬ ಉಪಾಧ್ಯಾಯರು ರಾಜೀನಾಮೆ ಕೊಟ್ಟಿದ್ದಾರೆ. ಅದರ ಬಗ್ಗೆ ತನಿಖೆ ಮಾಡಿಲ್ಲ. ಈಗ ಅಲ್ಲರತಕ್ಕಂಥ ಪ್ರಿನ್ಸಿಪಾಲರನ್ನು ಇನ್ನು ಎಷ್ಟು ಕಾಲ ಉಳಿಸಿ ಕೊಂಡು ಬರಬೇಕೆಂದಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹಣದ ಅಪವ್ಯಯವಾಗಿದೆ ಎಂಬ ಬಗ್ಗೆ ಸ್ಪೆಸಿಫಿಕ್ ಆದ ಇನ್ಸ್‌ಟೆನ್ಸ್ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಲ್ಲರುವ ಕಲಾ ಶಾಲೆಯನ್ನು ಎಲ್ಲಾ ರೀತಿ ಯಿಂದಲೂ ಅಭಿವೃದ್ಧಿಪಡಿಸಬೇಕೆಂಬುದೇ ಸರ್ಕಾರದ ಆಶಯವಾಗಿದೆ. ಈಗ ಇರುವುದು ತಾತ್ಕಾಲಿಕವಾದ ವ್ಯವಸ್ಥೆ ಮಾತ್ರ, ಅದಷ್ಟು ತೀವ್ರದಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಅಂತಿಮಗೊಳಿಸಿ ಸ್ಥಾಪನ್ನು ನೇಮಕ ಮಾಡುವುದಕ್ಕೆ ವಿಚಾರ ಮಾಡಿದ್ದೇವೆ. ಇದು ವಿಶೇಷ ಕಲಾಶಾಲೆಯಾಗಿರುವುದರಿಂದ ಮತ್ತು ಜನರ ಆಕರ್ಷಣೆ ಕಡಿಮೆ ಇರುವುದರಿಂದ ಈ ಶಾಲೆ ಯನ್ನು ಇನ್ನೂ ಚೆನ್ನಾಗಿ ಅಭಿವೃದ್ಧಿಪಡಿಸಬೇಕು, ಉದ್ಧಾರ ಮಾಡಬೇಕು ಎಂಬ ಬಗ್ಗೆ ಸರ್ಕಾರದ ಆಸಕ್ತಿ ಇದೆ. ಮತ್ತು ಅದರಂತೆ ಮಾಡುತ್ತಿದ್ದೇವೆ.

ಶ್ರೀ ಎಸ್. ಪಿ. ರಾಜಣ್ಣ.—ಇಲ್ಲಿ 54 ಜನ ವಿದ್ಯಾರ್ಥಿಗಳು ಇದ್ದಾರೆಂದು ಹೇಳಿದ್ದೀರಿ. ಉಪಾಧ್ಯಾಯರುಗಳು ಎಷ್ಟು ಜನ ಇದ್ದಾರೆ ಮತ್ತು ಈಗ ಇರುವ ತಾತ್ಕಾಲಿಕ ವ್ಯವಸ್ಥೆ ಇನ್ನೂ ಎಷ್ಟು ಕಾಲ ಇರುತ್ತದೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಕೇಡರ್ ಅಂಡ್ ರೆಕ್ರೂಟ್ ರೂರ್ಸ್ ಬಗ್ಗೆ ಕೆಲವು ಮಾಡರೇಷನ್ ಮಾಡಬೇಕಾಗಿ ಬಂತು. ಆದಕಾರಣ ತಡವಾಯಿತು. ಇನ್ನು ಕ್ಷಿಪ್ರದಲ್ಲಿಯೇ ಈ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂರ್ಸ್‌ನ್ನು ಜಾರಿಗೆ ತರಲು 7—8 ವರ್ಷಗಳನ್ನು ತೆಗೆದುಕೊಂಡಿರಿ. ಈ ವಿಚಾರ ದಲ್ಲಿಯೂ ಕೂಡ ಅದೇ ರೀತಿ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥಾದ್ದು ಏನೂ ಇಲ್ಲ. ಇನ್ನು 2–3 ತಿಂಗಳಲ್ಲಿಯೇ ನೇಮಕ ಮಾಡುತ್ತೇವೆ.

ಶ್ರೀ ಎಸ್. ಪಿ. ರಾಜಣ್ಣ.—ಅಲ್ಲಿ ಈಗ ಎಷ್ಟು ಮಂದಿ ಉಪಾಧ್ಯಾಯರುಗಳು ಇದ್ದಾರೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಆ ಬಗ್ಗೆ ಇನ್‌ಫರ್‌ಮೇಷನ್ ಇಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಈ ಕಲಾಶಾಲೆಯ ಸ್ಕೋರ್ಸ್‌ನ್ನು ನೋಡಿಕೊಳ್ಳುತ್ತಿದ್ದ ಒಬ್ಬರಿಂದ ಲಕ್ಷಾಂತರ ರೂಪಾಯಿಗಳ ಅಪವ್ಯಯವಾಗಿದ್ದರೂ ಕೂಡ ಆ ಬಗ್ಗೆ ಡಿ. ಟಿ. ಇ. ಅವರು ತನಿಖೆ ನಡೆಸದೆ ಅವರಿಗೇ ಮತ್ತೆ ಎಕ್ಸ್‌ಟೆನ್‌ಷನ್ ಕೊಟ್ಟು ಇರಿಸಿಕೊಂಡಿರುವುದರ ಉದ್ದೇಶವಾದರೂ ಕೂಡ ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂತಹ ಯಾವ ವಿಷಯವೂ ಕೂಡ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಎಸ್. ಚನ್ನಪ್ಪ.—ಕಲೆ ಅಂದರೆ ಅದರಲ್ಲಿ ಯಾವ ಯಾವ ವಿದ್ಯೆಗಳು ಬರುತ್ತವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಲ್ಲಿ ಮುಖ್ಯವಾಗಿ ಚಿತ್ರ ಕಲೆ ಇದೆ. ಡ್ರಾಯಿಂಗ್ ಇದೆ. ಕಮರ್ಷಿಯಲ್ ಆರ್ಟ್ಸ್ ಇದೆ. ಮಾಡಲಿಂಗ್ ಇದೆ, ಕ್ಲೇ–ಮಾಡಲಿಂಗ್ ಇದೆ. ಇವುಗಳ ಜೊತೆಗೆ ಇನ್ನು ಮುಂದೆ ಶಿಲ್ಪ ಕಲೆಯನ್ನು ಸಹ ಅಭಿವೃದ್ಧಿಪಡಿಸಬೇಕೆಂಬ ವಿಚಾರ ಇದೆ. ಇವುಗಳ ಜೊತೆಗೆ ಇತರ ಕಲೆಗಳನ್ನು ಸಹ ಅಭಿವೃದ್ಧಿಪಡಿಸಬೇಕೆಂಬ ಅಭಿಪ್ರಾಯ ಇದೆ.

ಶ್ರೀ ಎ. ಎಸ್. ಹಿರೇಗೌಡರ್.—ಇಲ್ಲಿ ಡಿಪ್ಲೊಮಾ ಪಾಸಾಗಿಲ್ಲದವರನ್ನು ನೇಮಕಮಾಡಿ ದರೆ ಇದು ಸರಿಯಾದ ಶಿಕ್ಷಣಕ್ಕೆ ಮಾರ್ಗವಾಗುವುದಿಲ್ಲ ಅಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇದು ತಾತ್ಕಾಲಿಕವಾದ ಕ್ರಮ. ಮುಂದೆ ಕೇಡರು ಹಾಗೂ ರೆಕ್ರೂಟುಮೆಂಟು ರೂರ್ಸ್ ಆದಮೇಲೆ ಸರಿಯಾದ ಏರ್ಪಾಡು ಮಾಡಲಾಗುತ್ತದೆ.

ಶ್ರೀ ಪ್ಯೆ. ಎಸ್. ಪಾಟೀಲ್.—ಈಗ ಇಲ್ಲಿನ ಪ್ರಿನ್ಸ್‌ಪಾಲರಿಗೆ ಕ್ವಾಲಿಫಿಕೇಷನ್ ಏನು ಇರಬೇಕೆಂದು ಮಾಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇವೆಲ್ಲಾ ಕೇಡರು ಹಾಗೂ ರೆಕ್ರೂಟುಮೆಂಟು ರೂರ್ಸ್ ಬಂದಮೇಲೆ ಗೊತ್ತಾಗುತ್ತದೆ.

ಶ್ರೀ ಎಲ್. ಎಸ್. ವೆಂಕಾಜಿರಾವ್.—ಕೇಡರು ರೂಲ್ಸು ಇನ್ನೆಷ್ಟು ತಿಂಗಳಲ್ಲಿ ಆಗಬಹುದು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇನ್ನೆರಡು ಮೂರು ತಿಂಗಳಲ್ಲಿ ಆಗಬಹುದು.

ಶ್ರೀ ಎಸ್. ಸಿ. ಕುಬನದ್—ನಾನ್ ಕ್ವಾಲಿಫೈಡ್ ಎಂದು ಇಲ್ಲಿ ನೇಮಕ ಮಾಡಿ ಮುಂದೆ ಕ್ವಾಲಿಫೈಡ್ ಆಗಿರುವವರನ್ನು ನೇಮಿಸಿದರೆ ಅವರಿಂದ ಮುಂದೆ ರಿಟ್ ಇತ್ಯಾದಿಗಳು ಕೋರ್ಟಿನಲ್ಲಿ ಫೈರಾದರೆ ಇಲ್ಲದ ಗೊಂದಲಗಳಿಗೆ ಅವಕಾಶವಾಗುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಿರತಕ್ಕವರು ಬೇರೆ ಒಂದು ಡಿಪಾರ್ಟ್‌ಮೆಂಟಿನಿಂದ ಡೆಪ್ಯುಟೇಷನ್‌ಮೇಲೆ ಬಂದಿದ್ದಾರೆ. ಪರ್ಮನೆಂಟು ನೇಮಕ ಮಾಡಿದಮೇಲೆ ಇವರು ವಾಪಸು ತಮ್ಮ ಇಲಾಖೆಗೆ ಹೋಗುತ್ತಾರೆ. ಇದರಲ್ಲೇನೂ ಕಷ್ಟವಾಗುವುದಿಲ್ಲ. ಇದು ಬರೀ ತಾತ್ಕಾಲಿಕವಾದ ಕ್ರಮ. ಮುಂದೆ ಅವರು ಅವರ ಒರಿಜಿನಲ್ ಪೋಸ್ಟಿಗೆ ಹೋಗುತ್ತಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ಸರಕಾರದ ಗಮನಕ್ಕೆ ನಾನು ಇಲ್ಲಿ ತರುತ್ತಿದ್ದೇನೆ. ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಅವರು ಇಲ್ಲಿನ ಲೆಕ್ಕ ಪತ್ರಗಳನ್ನು ತೆಗೆದುಕೊಂಡು ಬಂದು ಮತ್ತು ತನಿಖೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಇತ್ತು. ಇದರ ಬಗ್ಗೆ ಈಗ ರಾದರೂ ಸರಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಹೇಳುವ ಆರೋಪಗಳು ನಿಜವಾಗಿದ್ದರೆ ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಬಸವರಾಜ ಕಟ್ಟೀಮನಿ.—ನಾನು ಈ ಕರಾಶಾರೆಗೆ ಹೋಗಿ ನೋಡಿದ್ದೇನೆ. ಇಲ್ಲಿ ಹಣದ ಅಪವ್ಯಯವಾಗಿದೆ. ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ನಾನೂ ಕೂಡ ಒಂದು ಪ್ರಶ್ನೆ ಕಳುಹಿಸಿದ್ದೆ. ಇದುವರೆಗೆ ಏನಾಯಿತು ಎನ್ನುವುದೇ ನನಗೆ ತಿಳಿಯಲಿಲ್ಲ. ಇಲ್ಲಿ ದುರುಪಯೋಗವಾದ ಹಣವನ್ನು ಈಗಿರುವ ಶಿಕ್ಷಕರಿಂದ ಅವರ ಸಂಬಳದಲ್ಲಿ ವಸೂಲು ಮಾಡಲಾಗುತ್ತದೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಂತಹ ಪ್ರಶ್ನೆ ಇದರಲ್ಲಿ ಬರುವುದಿಲ್ಲ. ಇಲ್ಲಿ ಶಿಕ್ಷಕರ ಅನುಕೂಲಕ್ಕಾಗಿ ಇವರನ್ನು ನೇಮಿಸಿರುವುದರಿಂದ ಇವರು ಕೆಲಸ ಮಾಡಿದ ದಿನಗಳಿಗೆ ಸಂಬಳ ಕೊಡಲೇಬೇಕಾಗುತ್ತದೆ.

Loss of Stamps in State Huzur Treasury

111. Sri CHANNAIAH WADEYAR (Local Authorities' Constituency).—

Will the Minister for Finance, Planning and Youth Welfare be pleased to state :—

(*a*) whether there was a loss of stamps worth about Rs. 2,000 in the State Huzur Treasury in 1968 ;

(*b*) if so, the steps taken by the Government to recover the loss from the concerned and to fix the responsibility ?